## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 334 |
| 2. | ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ |
| 3. | ಉತ್ತರಿಸುವ ದಿನಾಂಕ | : | ಲೋಕೋಪಯೋಗಿ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ C 23-12-2021 |
| 4. | ಉತ್ತರಿಸುವವರು | : | ಮುಖ್ಯ ಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 12 ಅತಿ ದಟ್ಟಣೆ ರಸ್ತೆಗಳ (High Density Corridors) ಅಭಿವೃದ್ಧಿ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ (ಲೋಕೋಪಯೋಗಿ ಇಲಾಖೆಯಡಿಯಲ್ಲಿರುವ) ವಹಿಸಿಕೊಡಲು ಸರ್ಕಾರವು ಯಾವ ವರ್ಷದಲ್ಲಿ ನಿರ್ಧಾರ ಕೈಗೊಂಡಿತ್ತು; ಸದರಿ 12 ರಸ್ತೆಗಳ ಒಟ್ಟು ಉದ್ದವೆಷ್ಟು; ಯೋಜನೆಯ ಒಟ್ಟು ವೆಚ್ಚವೆಷ್ಟು; (ಸಂಪೂರ್ಣ ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ 191 ಕಿ.ಮೀ. ಉದ್ದದ 12 ಅತಿ ವಾಹನ ದಟ್ಟಣೆ ಹೊಂದಿರುವ (High Traffic Density Corridor) ರಸ್ತೆಗಳನ್ನು ಕೆ.ಆರ್.ಡಿ.ಸಿ.ಎಲ್ ಮುಖಾಂತರ ಪ್ರಾರಂಭಿಕ ಸುಧಾರಣೆ ಮತ್ತು ನಿರ್ವಹಣೆಯ ಅನುಷ್ಠಾನದ ಜವಾಬ್ದಾರಿಯನ್ನು ಕೈಗೊಳ್ಳಲು ಅಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 06-11-2019 ರಂದು ಕರ್ನಾಟಕ ಸರ್ಕಾರದ ಉನ್ನತ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ, 2020-21ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಿದ್ದ ಹಿನ್ನೆಲೆಯಲ್ಲಿ, ಈ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 109 ಎಂಎನ್‌ವೈ 2020, ದಿನಾಂಕ: 24-11-2020ರನ್ವಯ ಕೆ.ಆರ್.ಡಿ.ಸಿ.ಎಲ್‌ಗೆ ವಹಿಸಿಕೊಡಲಾಗಿರುತ್ತದೆ.<br><br>ಪ್ರಸ್ತಾಪಿತ 12 ಅತಿ ವಾಹನ ದಟ್ಟಣೆ ಹೊಂದಿರುವ ರಸ್ತೆಗಳ ವಿವರಗಳು ಕೆಳಕಂಡಂತಿವೆ. |

| ಹೆಚ್.ಡಿ.ಸಿ. ಸಂ | ರಸ್ತೆ | ಉದ್ದ (ಕಿ.ಮೀ) |
|---|---|---|
| ಹೆಚ್.ಡಿ.ಸಿ.-1 | ಬಳ್ಳಾರಿ ರಸ್ತೆ | 7.45 |
| ಹೆಚ್.ಡಿ.ಸಿ.-2 | ಹಳೇ ಮದ್ರಾಸ್ ರಸ್ತೆ | 18.50 |
| ಹೆಚ್.ಡಿ.ಸಿ.-3 | ಹಳೇ ಏರ್‌ಪೋರ್ಟ್ ರಸ್ತೆ | 17.15 |
| ಹೆಚ್.ಡಿ.ಸಿ.-4 | ಸರ್ಜಾಪುರ ರಸ್ತೆ | 8.75 |
| ಹೆಚ್.ಡಿ.ಸಿ.-5 | ಹೊಸೂರು ರಸ್ತೆ | 6.45 |
| ಹೆಚ್.ಡಿ.ಸಿ.-6 | ಬನ್ನೇರುಘಟ್ಟ ರಸ್ತೆ | 16.50 |
| ಹೆಚ್.ಡಿ.ಸಿ.-7 | ಕನಕಪುರ ರಸ್ತೆ | 14.50 |
| ಹೆಚ್.ಡಿ.ಸಿ.-8 | ಮೈಸೂರು ರಸ್ತೆ | 15.40 |
| ಹೆಚ್.ಡಿ.ಸಿ.-9 | ಮಾಗಡಿ ರಸ್ತೆ | 12.00 |
| ಹೆಚ್.ಡಿ.ಸಿ.-10 | ತುಮಕೂರು ರಸ್ತೆ | 7.90 |
| ಹೆಚ್.ಡಿ.ಸಿ.-11 | ವೆಸ್ಟ್ ಆಫ್ ಕಾರ್ಡ್ ರಸ್ತೆ | 8.40 |
| ಹೆಚ್.ಡಿ.ಸಿ.-12 | ಹೊರ ವರ್ತುಲ ರಸ್ತೆ | |
| | (a) ಮೈಸೂರು ರಸ್ತೆಯಿಂದ ಗೋರಗುಂಟೆ ಪಾಳ್ಯದ ವರೆಗೆ | 10.90 |
| | (b) ಗೋರಗುಂಟೆ ಪಾಳ್ಯದಿಂದ ಹಳೇ ಮದ್ರಾಸ್ ರಸ್ತೆ ವರೆಗೆ | 18.60 |
| | (c) ಕೆ.ಆರ್ ಪುರಂನಿಂದ ಹಳೇ ಏರ್‌ಪೋಟ್ ರಸ್ತೆ ವರೆಗೆ | 16.50 |
| | (d) ಸಿಲ್ಕ್ ಬೋರ್ಡ್‌ನಿಂದ ಮೈಸೂರು ರಸ್ತೆ ವರೆಗೆ | 12.00 |
| | ಒಟ್ಟು | 191.00 |

. . 2/-

| | | |
|---|---|---|
| | | ದಿನಾಂಕ: 24-11-2020ರ ಸರ್ಕಾರದ ಆದೇಶದಂತೆ, ಬೆಂಗಳೂರು ಮಹಾನಗರ ವ್ಯಾಪ್ತಿಯ 12 High Traffic Density Corridor ಗಳ ಪ್ರಾರಂಭಿಕ ಸುಧಾರಣೆ (ಒಟ್ಟು 65.85 ಕಿ.ಮೀ. ಗಳು) ಹಾಗೂ ದೈನಂದಿನ ನಿರ್ವಹಣೆಯನ್ನು ಯೋಜಿಸಲಾಗಿದ್ದು, ಕಾರಿಡಾರ್‌ಗಳಿಗೆ ಪ್ರಾರಂಭಿಕ ಹಂತದ ಅಭಿವೃದ್ಧಿಗಾಗಿ ತಗಲುವ ಒಟ್ಟು ಮೊತ್ತ ರೂ.**335.17** ಕೋಟಿಗಳು ಹಾಗೂ ಮೊದಲನೆಯ ವರ್ಷದ ನಿರ್ವಹಣಾ ಮೊತ್ತ ರೂ.**142.12** ಕೋಟಿಗಳು, ಹೀಗೆ ಒಟ್ಟು ಮೊತ್ತ ರೂ.**477.29** ಕೋಟಿಗಳಿಗೆ ಹಾಗೂ ಪ್ರತೀ ವರ್ಷ ಶೇಕಡ 5% ರ ಹೆಚ್ಚುವರಿ ಪರಿಗಣಿಸಿ, 2ನೇ, 3ನೇ, 4ನೇ ಮತ್ತು 5ನೇ ವರ್ಷಗಳ ನಿರ್ವಹಣಾ ವೆಚ್ಚಗಳನ್ನು ಒಳಗೊಂಡಂತೆ ಒಟ್ಟಾರೆ ರೂ.**1120.48** ಕೋಟಿಗಳಿಗೆ ಅನುಮೋದನೆಯಾಗಿರುತ್ತದೆ. |
| ಆ) | ಸದರಿ 12 ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಯಾವ ಮಾನದಂಡಗಳು/ ನಿಯಮಗಳಡಿ ಯಲ್ಲಿ ವರ್ಗಾಯಿಸಲಾಗಿದೆ; ಮತ್ತು ವರ್ಗಾಯಿಸಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು ಹಾಗೂ ಸಂಬಂಧಿಸಿದ ಅದೇಶಗಳನ್ನು ಒದಗಿಸುವುದು) | ಅಂದಿನ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 06-11-2019 ರಂದು ಕರ್ನಾಟಕ ಸರ್ಕಾರದ ಉನ್ನತ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಿದಂತೆ, 2020-21ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಿದ್ದ ಹಿನ್ನೆಲೆಯಲ್ಲಿ, ದಿನಾಂಕ: 12-11-2020ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ:525/2020ರಲ್ಲಿ ಕೈಗೊಂಡ ನಿರ್ಣಯದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 109 ಎಂಎನ್‌ವೈ 2020, ದಿನಾಂಕ: 24-11-2020 ರಲ್ಲಿ ಆದೇಶವನ್ನು ಹೊರಡಿಸಿ ಕೆ.ಆರ್.ಡಿ.ಸಿ.ಎಲ್‌ಗೆ ನಗರಾಭಿವೃದ್ಧಿ ಇಲಾಖೆಯಿಂದ ನೀಡಲಾಗಿರುತ್ತದೆ. ಆದೇಶವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಸದರಿ 12 ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಸ್ವರೂಪ ಸಮಗ್ರ ರಸ್ತೆ ಅಭಿವೃದ್ಧಿಯೇ; ರಸ್ತೆಯ ಇಕ್ಕೆಲಗಳ ಪಾದಚಾರಿ ಮಾರ್ಗಗಳ ಚರಂಡಿಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಕಾಮಗಾರಿಯು ಸಹಾ ಒಳಗೊಂಡಿದೆಯೇ; (ವಿವರ ನೀಡುವುದು) | ಬೆಂಗಳೂರು ಮಹಾನಗರ ವ್ಯಾಪ್ತಿಯ 12 High Traffic Density Corridor ಗಳಲ್ಲಿ ಪಾಲಿಕೆ ವತಿಯಿಂದ ಕೈಗೊಳ್ಳದಿರುವ ವ್ಯಾಪ್ತಿಗಳಲ್ಲಿ (Unattended Reaches) ಸ್ಥಳಕ್ಕೆ ಅನುಗುಣವಾಗಿ ಪ್ರಾರಂಭಿಕ ಹಂತದ ಅಭಿವೃದ್ಧಿಗಾಗಿ ಒಟ್ಟು 65.85 ಕಿ.ಮೀ ಗಳ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.<br>ಪ್ರಾರಂಭಿಕ ಸುಧಾರಣೆಯಡಿ ಕೈಗೊಳ್ಳಲು ಯೋಜಿಸಲಾಗಿರುವ ಪ್ರಮುಖ ಕಾಮಗಾರಿಗಳು ಈ ಕೆಳಕಂಡಂತಿವೆ:<br>• ರಸ್ತೆ Carriageway ಅಭಿವೃದ್ಧಿ ಪಡಿಸುವುದು.<br>• ರಸ್ತೆ ಇಕ್ಕೆಲಗಳ ಪಾದಚಾರಿ ಮಾರ್ಗಗಳ ಅಭಿವೃದ್ಧಿ.<br>• ರಸ್ತೆ ಬದಿ ಚರಂಡಿ ಅಭಿವೃದ್ಧಿ.<br>• ರಸ್ತೆ ವಿಭಜಕಗಳ ಅಭಿವೃದ್ಧಿ ಮತ್ತು ಸುಂದರೀಕರಣ.<br>• ರಸ್ತೆ ಬದಿ ಗಿಡಗಳನ್ನು ಅಳವಡಿಸುವುದು (Green Hedging)<br>• Culvert ಗಳ ಅಭಿವೃದ್ಧಿ.<br>• ಜಂಕ್ಷನ್‌ಗಳ ಅಭಿವೃದ್ಧಿ ಮತ್ತು ಬಸ್ ಬೇ ನಿರ್ಮಿಸುವುದು.<br>• Traffic Sign Boards ಮತ್ತು ರಸ್ತೆ ಸುರಕ್ಷತೆ ಪರಿಕರಗಳು ಅಳವಡಿಸುವುದು. |

| | | |
|---|---|---|
| | | ಬೆಂಗಳೂರು ಮಹಾನಗರ ವ್ಯಾಪ್ತಿಯ 12 High Traffic Density Corridor ಗಳ 191.00 ಕಿ.ಮೀ ರಸ್ತೆ ಉದ್ದದಲ್ಲಿ ಸುಮಾರು 112.29 ಕಿ.ಮೀ 4 ಪಥಗಳ ರಸ್ತೆ, 78.71 ಕಿ.ಮೀ. ಗಳ 6 ಪಥಗಳ ರಸ್ತೆ ಮತ್ತು 106.75 ಕಿ.ಮೀ. ಸರ್ವೀಸ್ ರಸ್ತೆಯನ್ನೂ ಒಳಗೊಂಡು ರಸ್ತೆ ದೈನಂದಿನ ನಿರ್ವಹಣೆಗೆ ಯೋಜನೆಯಲ್ಲಿ ಪರಿಗಣಿಸಲಾಗಿರುತ್ತದೆ.<br><br>ರಸ್ತೆ ದೈನಂದಿನ ನಿರ್ವಹಣೆ ಯೋಜನೆಯಲ್ಲಿ ಪರಿಗಣಿಸಿರುವ ಪ್ರಮುಖ ಕಾರ್ಯಗಳ ವಿವರ ಈ ಕೆಳಕಂಡಂತಿದೆ:<br>• ರಸ್ತೆ ಮತ್ತು ಪಾದಚಾರಿ ಮಾರ್ಗ ಗುಡಿಸುವುದು.<br>• ರಸ್ತೆಗಳಲ್ಲಿ Debris ತೆಗೆಯುವುದು.<br>• ರಸ್ತೆಯ ಇಕ್ಕೆಲಗಳ ಚರಂಡಿ Desilting ಮಾಡುವುದು.<br>• ರಸ್ತೆ ಬದಿ Green Hedging ಮತ್ತು ರಸ್ತೆ ವಿಭಜಕಗಳಲ್ಲಿನ ಗಿಡಗಳ ನಿರ್ವಹಣಿ ಮಾಡುವುದು.<br>• ರಸ್ತೆಗಳಲ್ಲಿ ತುರ್ತು ನಿರ್ವಹಣೆ ಕೆಲಸಗಳಾದ ರಸ್ತೆಬದಿ ಮರಗಳಿಂದ ಬಿದ್ದ ಶಿಥಿಲ ರೆಂಬೆ ಕೊಂಬೆಗಳನ್ನು ತೆಗೆಯುವುದು, ರಸ್ತೆಯಲ್ಲಿ ಕೆಟ್ಟು ನಿಂತ ಸ್ಥಗಿತ ವಾಹನಗಳನ್ನು ತೆರವುಗೊಳಿಸುವುದು ಇತ್ಯಾದಿ.<br>• ರಸ್ತೆ patrolling ಮಾಡುವುದು.<br>• Command and Control Center ನಿರ್ವಹಣೆ.<br>• ರಸ್ತೆಗೆ Retro-reflectivity Marking, Traffic Sign Boards ಅಳವಡಿಸುವುದು.<br>• ರಸ್ತೆಗಳಲ್ಲಿ ಹಾಲಿ ಇರುವ ಮೇಲು ಸೇತುವೆ ಹಾಗೂ ಕೆಳ ಸೇತುವೆಗಳ ನಿರ್ವಹಣೆ. |
| ಈ) | ಡೆಮೊ ರೀಚ್ (Demo reach/stretch) ಯಡಿಯಲ್ಲಿ ಎಷ್ಟು ಉದ್ದದ ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ಅಭಿವೃದ್ಧಿಪಡಿಸಿ, ನಿರ್ವಹಣೆ ಕೈಗೊಂಡಿದೆ; (ವಿವರ ನೀಡುವುದು) | High Traffic Density Corridor ಯೋಜನೆ ಅಡಿಯಲ್ಲಿ Demo reach / stretch ಗಳಾಗಿ 2 ರಸ್ತೆಗಳನ್ನು ಆಯ್ಕೆ ಮಾಡಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ರಸ್ತೆ ಅಭಿವೃದ್ಧಿ ಕೆಲಸಗಳನ್ನು ನಗರ ಭೂಸಾರಿಗೆ ನಿರ್ದೇಶನಾಲಯ (*DULT*) ಅಂತಿಮಗೊಳಿಸಿದ ವಿನ್ಯಾಸದಂತೆ ಕೈಗೊಳ್ಳಲಾಗಿದೆ.<br>HDC-3: ಹಳೆ ಏರ್‌ಪೋರ್ಟ್ ರಸ್ತೆಯ ದೊಮ್ಮಲೂರು ಫ್ಲೈ ಓವರ್ ಕಡೆಯಿಂದ ಹೆಚ್.ಎ.ಎಲ್ ವಿಮಾನ ನಿಲ್ದಾಣ ರಸ್ತೆಯ ಜಂಕ್ಷನ್‌ವರೆಗೆ (ಇಸ್ರೋ ಜಂಕ್ಷನ್ ಅಂಡರ್‌ಪಾಸ್ BBMP Battery Limits ಹೊರತುಪಡಿಸಿ) ಒಟ್ಟು ಉದ್ದ– 1.50 ಕಿ.ಮೀ, ಅಂದಾಜು ಮೊತ್ತ ರೂ.4.65 ಕೋಟಿಗಳು (ಕಾಮಗಾರಿ ಶೇ.90% ರಷ್ಟು ಭೌತಿಕ ಪ್ರಗತಿಯಾಗಿದ್ದು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ). |

| | | |
|---|---|---|
| | | 2. HDC-9: ಮಾಗಡಿ ರಸ್ತೆಯ ಕೊಟ್ಟಿಗೆಪಾಳ್ಯದಿಂದ ವಿಶ್ವನೀಡಂ ಜಂಕ್ಷನ್ ವರೆಗೆ ಉದ್ದ– 1.10 ಕಿ.ಮೀ. ಅಂದಾಜು ಮೊತ್ತ ರೂ.4.70 ಕೋಟಿಗಳು. (ಕಾಮಗಾರಿ ಶೇ.65% ಭೌತಿಕ ಪ್ರಗತಿಯಾಗಿದ್ದು, ಪ್ರಸ್ತುತ ಸೂಕ್ತ ಹವಮಾನದಲ್ಲಿ ರಸ್ತೆ ಡಾಂಬರೀಕರಣ ಕೈಗೊಳ್ಳಲಾಗುವುದು) |
| ಉ) | ಸದರಿ 12 ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಕಾಮಗಾರಿಯ ಪ್ರಸ್ತುತ ಭೌತಿಕ/ಆರ್ಥಿಕ ಪ್ರಗತಿಯು ಯಾವ ಹಂತದಲ್ಲಿದೆ? (ವಿವರಗಳನ್ನು ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ 191 ಕಿ.ಮೀ. ಉದ್ದದ 12 ಅತಿ ವಾಹನ ದಟ್ಟಣೆ ಹೊಂದಿರುವ (High Traffic Density Corridor) ರಸ್ತೆಗಳನ್ನು ಕೆ.ಆರ್.ಡಿ.ಸಿ.ಎಲ್ ಮುಖಾಂತರ ಪ್ರಾರಂಭಿಕ ಸುಧಾರಣೆ ಮತ್ತು ನಿರ್ವಹಣೆಯ ಅನುಷ್ಠಾನಕ್ಕೆ ಅನುವಾಗುವಂತೆ ಸರ್ಕಾರದಿಂದ ಅನುಮೋದನೆ ಗೊಂಡಿರುವಂತೆ ಒಟ್ಟು 04 ಪ್ಯಾಕೇಜ್‌ಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಅದರಂತೆ, ಕೆ.ಆರ್.ಡಿ.ಸಿ.ಎಲ್. ಸಂಸ್ಥೆಯು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಆರ್ಥಿಕ ಬಿಡ್‌ಗಳಿಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಟೆಂಡರ್‌ಗಳಲ್ಲಿ ಕೆಲವೊಂದು ಲೋಪದೋಷಗಳು ಕಂಡುಬಂದಿರುವ ಹಿನ್ನೆಲೆಯಲ್ಲಿ, ಸದರಿ ಟೆಂಡರ್‌ಗಳನ್ನು ರದ್ದುಪಡಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ನಿರ್ದೇಶನ ನೀಡಲಾಗಿರುತ್ತದೆ. |

**ಸಂಖ್ಯೆ: ನಅಇ 385 ಎಂಎನ್‌ವೈ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಚುಕ್ಕೆಗುರುತಿನ ಪ್ರಶ್ನೆಸಂಖ್ಯೆ 324 ಕ್ಕೆ ಅನುಬಂಧ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 12 High Traffic Density Corridor ಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL) ವತಿಯಿಂದ ನಿರ್ವಹಿಸಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿ. ರವರ ಪತ್ರ ಸಂಖ್ಯೆ: ಕರಅನಿ/ವ್ಯನಿ/HDC/2019-20/4329, ದಿನಾಂಕ: 25-03-2020.
2. ಸಮಿತಿ ಸಭಾ ನಡವಳಿಯ ಪತ್ರ ದಿನಾಂಕ: 02-07-2020 ಮತ್ತು 22-09-2020.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿ. ರವರ ಪತ್ರ ಸಂಖ್ಯೆ: ಕರಅನಿ/ವ್ಯನಿ/HDC/2019-20/1426, ದಿನಾಂಕ: 16-09-2020.
4. ಆಯುಕ್ತರು, ಬಿ.ಬಿ.ಎಂ.ಪಿ. ರವರ ಪತ್ರ ಸಂಖ್ಯೆ: ಬಿಬಿಎಂಪಿ/ಮುಅ/(ರ.ಮೂಸೌ)/ಪಿಆರ್/20-21, ದಿನಾಂಕ: 06-10-2020.

*********

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 25-03-2020ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿ. ರವರು ಪಾಲಿಕೆ ವ್ಯಾಪ್ತಿಯ 12 High Traffic density corridor ನ ಒಟ್ಟು 191 ಕಿಲೋ ಮೀಟರ್ ಉದ್ದದ ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಉನ್ನತೀಕರಣ ಮತ್ತು ದೈನಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲು ಅನುಮೋದನೆ ನೀಡುವ ವಿಷಯದ ಕುರಿತ ಪ್ರಸ್ತಾವನೆ ಆಗಿರುತ್ತದೆ. ಅದರಂತೆ ಸವಿವರವಾದ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, 12 High Traffic density corridor ನ ರಸ್ತೆಗಳಿಗೆ ಸಂಬಂಧಿಸಿದಂತೆ ನಮೂದಿಸಿರುವ 5 ಅಂಶಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 02-07-2020 ಮತ್ತು 22-09-2020ರ ಪತ್ರಗಳಲ್ಲಿ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 12 High Traffic Density Corridor ಗಳ ಪ್ರಾರಂಭಿಕ ಸುಧಾರಣೆ ಮತ್ತು ಕಾರ್ಯನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (KRDCL) ಮೂಲಕ ನಿರ್ವಹಿಸುವ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಅದರಂತೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (KRDCL) ಸಂಸ್ಥೆಯು ದಿನಾಂಕ: 23-03-2020ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಈ ಬೆಳವಣಿಗೆಯ ಬಗ್ಗೆ ದಿನಾಂಕ: 01-07-2020ರಂದು ನಡೆದ ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

ಆದರೆ, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಸೆಕ್ಷನ್ 265(1)ರನ್ವಯ ಸರ್ಕಾರದ ನಿಯಂತ್ರಣದ ಮೇರೆಗೆ ನಿಗಮದಲ್ಲಿನ ಎಲ್ಲಾ ಸಾರ್ವಜನಿಕ ಬೀದಿಗಳು, ಅವುಗಳ ನೆಲೆಗಟ್ಟುಗಳು, ಕಲ್ಲುಗಳು ಮತ್ತು ಇತರೆ ಸಾಮಗ್ರಿಗಳೊಂದಿಗೆ ಮತ್ತು ಸಾರ್ವಜನಿಕವಾದದ್ದೇ ಆಗಲಿ ಅಥವಾ ಅನ್ಯಥಾ ಖಾಸಗಿಯದೇ ಆಗಲೀ ನಿಗಮದಲ್ಲಿ ನಿಹಿತವಾಗಿರುತ್ತವೆ. ಮುಂದುವರೆದು, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಸೆಕ್ಷನ್ 265(2)ರನ್ವಯ ಸರ್ಕಾರವು ನಿಗಮದೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಯಾವುದೇ ಅಂತಹ

...2/-

Scanned by CamScanner

ಬೀದಿ, ಗ್ರಾಮಸಾರ, ಚರಂಡಿ, ಒಳಚರಂಡಿ, ಚರಂಡಿ ವ್ಯವಸ್ಥೆ, ಕಾಮಗಾರಿ, ಸುರಂಗ ಮತ್ತು ತರಿಗಾಲುವೆ ಅಥವಾ ಮರಗಳನ್ನು ನಿಗಮದ ನಿಯಂತ್ರಣದಿಂದ ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

ಆದುದರಿಂದ, ಪಾಲಿಕೆ ವ್ಯಾಪ್ತಿಯ 12 High Traffic Density Corridor ಗಳನ್ನು ಹಿಂಪಡೆದು, KRDCL ಗೆ ಅಧಿಕೃತವಾಗಿ ಸದರಿ ರಸ್ತೆಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ನೀಡುವ ಬಗ್ಗೆ ಸರ್ಕಾರದ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ 12 High Traffic Density Corridor ಗಳನ್ನು KRDCL ಮೂಲಕ ನಿರ್ವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಅಭಿಪ್ರಾಯ/ಆಕ್ಷೇಪಣೆ/ ಸಹಮತಿಯನ್ನು ಜರೂರಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಬಿಬಿಎಂಪಿ ಆಯುಕ್ತರನ್ನು ಕೋರಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 16-09-2020ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 12 High Traffic Density Corridor ಗಳ ಉನ್ನತೀಕರಣ ಹಾಗೂ ದೈನಂದಿನ ನಿರ್ವಹಣೆ ಕಾರ್ಯವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 06-11-2019 ರಂದು ಕರ್ನಾಟಕ ಸರ್ಕಾರದ ಉನ್ನತ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ, ತದನಂತರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಹಲವಾರು ಸಭೆಗಳಲ್ಲಿ ಕೈಗೊಂಡ ತೀರ್ಮಾನದಂತೆ, ದಿನಾಂಕ: 23-03-2020ರ ಪತ್ರದಲ್ಲಿ ಅಗತ್ಯವಿರುವ ಅಂಶಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ರೂ.477.29 ಕೋಟಿಗಳ ಮೊತ್ತಕ್ಕೆ ಅನುಮೋದನೆ ಕೋರಿ ಸಲ್ಲಿಸಲಾಗಿರುತ್ತದೆ.

ದಿನಾಂಕ: 05-05-2020 ರಂದು ಸದರಿ ಪ್ರಸ್ತಾವನೆಗೆ ಅನುದಾನ ನಿಗದಿಪಡಿಸಲು ಕೋರಿ ಹಣಕಾಸು ಇಲಾಖೆಗೆ ಕಡತ ಸಲ್ಲಿಸಲಾಗಿದ್ದು, ಹಣಕಾಸು ಇಲಾಖೆಯು ದಿನಾಂಕ: 01-07-2020 ರ ಟಿಪ್ಪಣಿಯಲ್ಲಿ ರೂ.300.00 ಕೋಟಿಗಳನ್ನು ಪ್ರಾರಂಭಿಕ ಸುಧಾರಣೆಗೆ ಹಾಗೂ ರೂ.100.00 ಕೋಟಿಗಳನ್ನು ದೈನಂದಿನ ಕಾರ್ಯನಿರ್ವಹಣೆಗಾಗಿ ಸೀಮಿತಗೊಳಿಸಿ, ಆಡಳಿತಾತ್ಮಕ ಅನುಮೋದನೆಯನ್ನು ಸಚಿವ ಸಂಪುಟ ಸಭೆಯಲ್ಲಿ ಪಡೆಯುವ ಷರತ್ತಿಗೊಳಪಡಿಸಿ ಅನುಮೋದನೆ ನೀಡಿರುತ್ತದೆ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 29-07-2020 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಮನ್ವಯ ಸಮಿತಿ ಸಭೆಯಲ್ಲಿ 12 High Traffic Density Corridor ಗಳ ಉನ್ನತೀಕರಣ ಹಾಗೂ ದೈನಂದಿನ ನಿರ್ವಹಣೆ ಕಾರ್ಯವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳುವ ಸಂಬಂಧ ಸಂಪುಟ ಸಭೆಯ ಟಿಪ್ಪಣಿ ತಯಾರಿಸಿ ಅನುಮೋದನೆ ಪಡೆಯುವ ಸಲುವಾಗಿ ಸದರಿ ರಸ್ತೆಗಳನ್ನು ಪಾಲಿಕೆಯಿಂದ ಹಸ್ತಾಂತರಿಸುವ ವಿಷಯವಾಗಿ ಅತೀ ತುರ್ತಾಗಿ ಸಮ್ಮತಿಯನ್ನು ನೀಡಲಾಗುವುದೆಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಡಿ.ಸಿ.ಎಲ್. ಇವರು ತಿಳಿಸಿರುತ್ತಾರೆ.

ಸದರಿ ಸಮನ್ವಯ ಸಮಿತಿ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ, ಕಾಮಗಾರಿಯ ತುರ್ತು ಅಧ್ಯತೆಯನ್ನು ಪರಿಗಣಿಸಿ 12 High Traffic Density Corridor ಗಳ ಉನ್ನತೀಕರಣ ಹಾಗೂ ದೈನಂದಿನ ನಿರ್ವಹಣೆ ಕಾರ್ಯವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತುರ್ತಾಗಿ ಅನುಷ್ಠಾನಗೊಳಿಸುವ

. . .3/-

Scanned by CamScanner

ಸಂಬಂಧ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಹಾಗೂ ತದನಂತರದ ಕಾಮಗಾರಿ ಮೇಲುಸ್ತುವಾರಿಗೆ ಯೋಜನಾ ನಿರ್ವಹಣೆಯನ್ನು ಕೈಗೊಳ್ಳಲು ಅನುಭವಿ ಹಾಗೂ ಪರಿಣಿತ ಸಮಾಲೋಚಕರನ್ನು ನೇಮಿಸಲು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ, ಈಗಾಗಲೇ ಸಮಾಲೋಚಕರನ್ನು ಗುರುತಿಸಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಕಾರ್ಯಪ್ರವೃತ್ತರಾಗಿದ್ದು, ಸರ್ಕಾರದ ಅನುಮೋದನೆ ನಿರೀಕ್ಷಿಸಿ ತುರ್ತು ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ಕ್ರಮವಹಿಸಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿ. ರವರು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಅಂಶಗಳನ್ನು ಪರಿಗಣಿಸಿ (To implement the project and to maintain the said corridors effectively, carryout in a systematic and in sequential manner with high standards kept by KRDCL) ಕಾಮಗಾರಿಯ ಅನುಷ್ಠಾನದ ಬಗ್ಗೆ ಈ ಹಿಂದೆ ಕೋರಿರುವಂತೆ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಕೆ.ಆರ್.ಡಿ.ಸಿ.ಎಲ್ ರವರು ಕೋರಿರುತ್ತಾರೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 12 High Traffic density corridor ನ ಉದ್ದ 191 ಕಿಲೋ ಮೀಟರ್ ರಸ್ತೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯಾಪ್ತಿಗೆ ಉನ್ನತೀಕರಣಕ್ಕಾಗಿ ಮತ್ತು ದೈನಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲು ಅನುಮೋದನೆ.
2. 12 High Traffic density corridor ಗಳಲ್ಲಿ ಪ್ರಸ್ತುತ ಪಾಲಿಕೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ವ್ಯಾಪ್ತಿಯನ್ನು ಹೊರತುಪಡಿಸಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದಿರುವ ಉಳಿಕೆ ಭಾಗವನ್ನು (Unattended Reaches) ಹಸ್ತಾಂತರಿಸಿಕೊಳ್ಳುವುದು.
3. 12 High Traffic density corridor ನ ಪ್ರಾರಂಭಿಕ ಹಂತದ ಸುಧಾರಣೆ ಮತ್ತು ದೈನಂದಿನ ನಿರ್ವಹಣೆಗಾಗಿ ಅಂದಾಜು ರೂ.477.29 ಕೋಟಿಗಳ ಮೊತ್ತಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು 2020-21ನೇ ಸಾಲಿನಿಂದ 2024-25ನೇ ಸಾಲಿನವರೆಗೆ ವಾರ್ಷಿಕ ಅನುದಾನವನ್ನು ಒದಗಿಸುವುದು.
4. 12 High Traffic density corridor ನ ಪ್ರಾರಂಭಿಕ ಹಂತದ ಸುಧಾರಣೆ ಮತ್ತು ದೈನಂದಿನ ನಿರ್ವಹಣಾ ಟೆಂಡರ್‌ಗಳನ್ನು 3 ಪ್ಯಾಕೇಜ್‌ಗಳಾಗಿ ಟೆಂಡರ್ ಕರೆಯಲು ಅನುಮೋದನೆ.
5. ದೈನಂದಿನ ನಿರ್ವಹಣಾ ಅವಧಿಯನ್ನು ಮೊದಲು ಮೂರು ವರ್ಷಗಳ ಅವಧಿಗೆ ನೀಡಿ, ಗುತ್ತಿಗೆದಾರರ ಕಾರ್ಯಕ್ಷಮತೆಯ (Performance) ಆಧಾರದ ಮೇಲೆ ಮುಂದಿನ ಎರಡು ವರ್ಷಗಳಿಗೆ ವಿಸ್ತರಣೆ ಮಾಡುವ ಅಂಶವನ್ನು ಟೆಂಡರ್‌ನಲ್ಲಿ ಅಳವಡಿಸಲು ಅನುಮೋದನೆ.
6. 12 High Traffic density corridor ನ ಕಾಮಗಾರಿಗಳಿಗೆ ಅವಶ್ಯಕವಿರುವ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಯಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಹಾಗೂ ಇದಕ್ಕಾಗಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಒಂದು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಅನುಮೋದನೆ.

ಸಹಿ/-

Scanned by CamScanner

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 06-10-2020ರ ಪತ್ರದಲ್ಲಿ, ಬಿಬಿಎಂಪಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 13000 ಕಿಮೀ ಉದ್ದದ ರಸ್ತೆ ಜಾಲವಿದ್ದು, ಈ ರಸ್ತೆ ಜಾಲದಲ್ಲಿ 12 High Traffic Density Corridor ಮತ್ತು 474 ಕಿ.ಮೀ ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳಿದ್ದು, ಪ್ರಸ್ತುತ ಸದರಿ ರಸ್ತೆಗಳ ಮೇಲ್ವಿಚಾರಣೆ / ಅಭಿವೃದ್ಧಿ ಮತ್ತು ಉನ್ನತೀಕರಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತ್ಯೇಕವಾಗಿ ರಸ್ತೆಗಳ ಅಭಿವೃದ್ಧಿಗಾಗಿ ನಿಯೋಜನೆಗೊಂಡಿರುವ ರಸ್ತೆ ಮೂಲಭೂತ ಸೌಕರ್ಯ ಶಾಖೆ ವತಿಯಿಂದ ನಿರ್ವಹಣೆ ಮಾಡಲಾಗಿರುತ್ತದೆ.

ಮುಂದುವರೆದು, ದಿನಾಂಕ: 06-11-2019ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ ಪಾಲಿಕೆಗೆ ವಿವಿಧ ರಸ್ತೆಗಳ ಅಭಿವೃದ್ಧಿಯ ಕಾರ್ಯವ್ಯಾಪ್ತಿ ಇರುವುದರಿಂದ 12 High Traffic Density Corridor ಗಳ ನಿರ್ವಹಣೆ ಮಾಡುವುದು ಕಷ್ಟವಾಗಬಹುದೆಂಬ ಉದ್ದೇಶದಿಂದ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ "ರಸ್ತೆ ನಿರ್ವಹಣೆ ಮತ್ತು ಉನ್ನತೀಕರಣಕ್ಕೆ" ಪ್ರತ್ಯೇಕವಾದ ಅನುದಾನದ ಅಡಿಯಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥೆ ಇಲ್ಲದೇ ಇರುವುದರಿಂದ, 12 High Traffic Density Corridor ಗಳ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿರುತ್ತದೆಂದು ಅಭಿಪ್ರಾಯಿಸಿ, ಸದರಿ 12 High Traffic Density Corridor ಗಳ ಪ್ರಾರಂಭಿಕ ಅಭಿವೃದ್ಧಿ, ಉನ್ನತೀಕರಣ ಮತ್ತು ನಿರ್ವಹಣೆಯನ್ನು ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಗೆ ವಹಿಸಲಾಗಿರುತ್ತದೆ. 12 High Traffic Density Corridor ಗಳ ವಿವರ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

| Sl. No. | Name of the Corridor | Length of the Corridor (in kms) |
|---|---|---|
| 1) | Bellary Road from Chalukya Circle to Hebbal upto start of NH limits via Mekhri Circle | 7.45 |
| 2) | Old Madras Road (from Trinity Circle to NH limits via Indiranagar, KR Puram Cablestay Bridge)<br>HDC-2(b) from KR Puram Railway Station to Hopefarm on Whitefield via Hoodi. | 18.50 |
| 3) | Old Airport Road (from ASC Center to Kadugodi via HAL, Hopefarm on Whitefield) | 17.15 |
| 4) | Sarjapura Road (from Hosur Road to Carmelram Bridge via Jakkasandra, Iblur) | 8.75 |
| 5) | Hosur Road (from Vellara Junction to Silk Board via Madiwala) | 6.45 |
| 6) | Bannergatta Road corridor from Hosur Road to Bannerghatta via Jayadeva, Jedimara, Kolifarm | 16.50 |
| 7) | Kanakapura Road from KR Road to Nice Road via Banashankari, Konanakunte Cross | 14.50 |
| 8) | Mysore Road from Hudson Circle to Nice Road via Sirsi flyover, Nayandanahalli, Jnanabharathi jn. | 15.40 |
| 9) | Magadi Road from Old Binnymill to Nice Road via Tollgate, Jaimunirao Circle, Sumanahalli, Sunkadakatte | 12.00 |
| 10) | Tumkur Road corridor from Sangolli Rayanna Circle to Gorguntepalya on Tumkur Road via Navarang Circle | 7.90 |
| 11) | West of Chord Road (from Sandal Soap Factory to Mysore Road via Tollgate Underpass) | 8.40 |

..5/-

Scanned by CamScanner

| | | |
|---|---|---|
| 12) (a) | ORR Mysore to Tumkur road (from Nayandanahalli to Gorguntepalya via Sumanahalli junction) | 10.90 |
| 12) (b) | ORR Tumkur Road to KR Puram. (from Gorguntepalya to Old Madras Road via BEL Circle, Hebbal jn. Nagawara) | 18.60 |
| 12) (c) | ORR KR Puram to Silk Board (from Lowry junction to Silk Board via Agara) | 16.50 |
| 12) (d) | ORR Silk Board to Mysore Road (from Silk Board to Nayandanahalli via Jayadeva jn. Jedimara, Sarakki) | 12.00 |
| | | |
| | Total | **191.00** |

ದಿನಾಂಕ: 06-11-2019ರ ಸಭೆಯ ನಿರ್ಣಯದಂತೆ ಮೇಲ್ಕಂಡ 12 High Traffic Density Corridor ಗಳ ಅಭಿವೃದ್ಧಿಯನ್ನು ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಗೆ ವಹಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆ ಮೂಲಭೂತ ಸೌಕರ್ಯ ಶಾಖೆಯ ಅಭಿಯಂತರರು ಮತ್ತು ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯ ಅಧಿಕಾರಿಗಳು ಜಂಟಿ ತಪಾಸಣೆಯನ್ನು ನಡೆಸಿ, ಪ್ರಾರಂಭಿಕ ಹಂತದ ಸುಧಾರಣಾ ಮೊತ್ತ ಮತ್ತು ವಾರ್ಷಿಕ ದೈನಂದಿನ ನಿರ್ವಹಣಾ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿವರ ಕೆಳಕಂಡಂತಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

(ಮೊತ್ತ ರೂ. ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 2020-21 | 2021-22 | 2022-23 | 2023-24 | 2024-25 |
|---|---|---|---|---|---|---|
| 1 | ಪ್ರಾರಂಭಿಕ ಹಂತದ ಸುಧಾರಣೆ ಮೊತ್ತ | 335.17 | 0.00 | 0.00 | 0.00 | 0.00 |
| 2 | ವಾರ್ಷಿಕ ದೈನಂದಿನ ನಿರ್ವಹಣೆ ಮೊತ್ತ | 142.12 | 149.23 | 156.69 | 164.52 | 172.75 |
| | ಒಟ್ಟು ರೂ. | 477.29 | 149.23 | 156.69 | 164.52 | 172.75 |

ಸದರಿ 12 High Traffic Density Corridor ಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ದಿನಾಂಕ: 01-07-2020ರಂತೆ ಲೆಕ್ಕ ಶೀರ್ಷಿಕೆ: 4217-01-800-0-02 "Capital Support to Special Infrastructure Project of Bangalore" ಅಡಿಯಲ್ಲಿ ಪ್ರಸ್ತಾಪಿತ ರೂ.477.29 ಕೋಟಿಗಳ ಅಂದಾಜು ಪಟ್ಟಿಗೆ ರೂ.400.00 ಕೋಟಿಗಳ ಅನುಮೋದನೆ ನೀಡಿದ್ದು, ಉಳಿಕೆ ಹೆಚ್ಚುವರಿ ಮೊತ್ತವನ್ನು ಸೂಕ್ತ ಪಾಲಿಕೆ ಸಭೆಯ ನಿರ್ಣಯದೊಂದಿಗೆ ಅಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.77.29 ಕೋಟಿಗಳನ್ನು ಭರಿಸಬೇಕೆಂದು ಸೂಚಿಸಿರುತ್ತದೆ.

ಪ್ರಸ್ತುತ, ಸದರಿ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಸದರಿ 12 High Traffic Density Corridor ಗಳ ಮೇಲ್ವಿಚಾರಣೆ / ಅಭಿವೃದ್ಧಿ ಮತ್ತು ಉನ್ನತೀಕರಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ನೀಡುವ ಬಗ್ಗೆ ಪುನರ್ ಪರಿಶೀಲಿಸುವುದು ಸೂಕ್ತವೆಂದು ಪರಿಗಣಿಸಿ ಪಾಲಿಕೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶಿಯಿಂದ ಸದರಿ 12 High Traffic Density Corridor ಗಳನ್ನು ಅಭಿವೃದ್ಧಿಪಡಿಸುವುದು ಕೆಳಕಂಡ ಕಾರಣಗಳಿಗಾಗಿ ಸೂಕ್ತವಾಗಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ಅಭಿಪ್ರಾಯಿಸಿರುತ್ತಾರೆ.

. . .6/-

Scanned by CamScanner

1. ಈ ಹಿಂದೆ 2008-09ನೇ ಸಾಲಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಆಯ್ದ ಕೆಲವು ರಸ್ತೆಗಳ ಅಭಿವೃದ್ಧಿಯನ್ನು "ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಲಾಗಿದ್ದು, ಸದರಿ ಸಂಸ್ಥೆಯು ರಸ್ತೆ ಅಭಿವೃದ್ಧಿಪಡಿಸಿ ತದನಂತರ "ರಸ್ತೆಗಳ ದೋಷ ಮುಕ್ತ ನಿರ್ವಹಣೆ ಅವಧಿ" (Defect Liability Period) ಯಲ್ಲಿ ರಸ್ತೆಗಳ ಮೇಲ್ವಿಚಾರಣೆಯನ್ನು ಮಾಡಲಾಗದೆ ಸಾರ್ವಜನಿಕರಿಂದ ಹಲವಾರು ದೂರುಗಳು ಬಂದು ಸದರಿ ದೂರುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮರು ನಿರ್ದೇಶನ ಮಾಡುವ ಕ್ರಮದಿಂದ ಸಾರ್ವಜನಿಕರಲ್ಲಿ ಗೊಂದಲ ಮತ್ತು ಅಸಮಾಧಾನ ಉಂಟಾಗಿರುತ್ತದೆ.
2. ಇದೇ ರೀತಿ 2015-16ನೇ ಸಾಲಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ಆಯ್ದ ಕೆಲವು ರಸ್ತೆಗಳ ಅಭಿವೃದ್ಧಿಯನ್ನು "ಕರ್ನಾಟಕ ಲೋಕೋಪಯೋಗಿ ಇಲಾಖೆ"ಗೆ ನೀಡಿದ ಸಂದರ್ಭದಲ್ಲಿಯೂ ಸದರಿ ರಸ್ತೆಯ ನಿರ್ಮಾಣ ಮಾಡಿದ ನಂತರ ಆ ರಸ್ತೆಗಳ ನಿರ್ವಹಣೆ, ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಮನ್ವಯಗಳನ್ನು ಸಾಧಿಸಲಾಗದೆ, ಸಾರ್ವಜನಿಕರ ವಲಯದಲ್ಲಿ ತೊಂದರೆ ಉಂಟಾಗಿ ಅಂತಿಮವಾಗಿ ಪಾಲಿಕೆಯಿಂದ "ರಸ್ತೆಗಳ ದೋಷ ಮುಕ್ತ ನಿರ್ವಹಣೆ ಅವಧಿ (Defect Liability Period) ಯನ್ನು ನಿರ್ವಹಿಸಲಾಗಿರುತ್ತದೆ.
3. ಆರ್ಥಿಕ ಇಲಾಖೆಯು ರೂ.477.29 ಕೋಟಿಗಳ ಅಂದಾಜು ಪಟ್ಟಿಗೆ ರೂ.400.00 ಕೋಟಿಗಳನ್ನು ಮಾತ್ರ ನೀಡಿದ್ದು, ಉಳಿಕೆ ರೂ.77.29 ಕೋಟಿಗಳನ್ನು ಪಾಲಿಕೆಯ ಸ್ವಂತ ಆರ್ಥಿಕ ಸಂಪನ್ಮೂಲದಿಂದ ಭರಿಸಿಕೊಳ್ಳಬೇಕೆಂದು ಸೂಚಿಸಿರುವುದರಿಂದ, ಪಾಲಿಕೆಯೇ 12 High Traffic Density Corridor ಗಳ ಮೇಲ್ವಿಚಾರಣೆ / ಅಭಿವೃದ್ಧಿ ಮತ್ತು ಉನ್ನತೀಕರಣ ಮಾಡುವುದು ಸೂಕ್ತವಾಗಿರುತ್ತದೆ.
4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸದರಿ 12 High Traffic Density Corridor ಗಳ ಅಭಿವೃದ್ಧಿಗೆ ಪ್ರತ್ಯೇಕ ಅನುದಾನ ಮೀಸಲಿಡಲಾಗದ ಹಿನ್ನೆಲೆಯಲ್ಲಿ ಸದರಿ ರಸ್ತೆಗಳ ಅಭಿವೃದ್ಧಿ / ನಿರ್ವಹಣೆಯಲ್ಲಿ ಹಿನ್ನಡೆ ಉಂಟಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸರ್ಕಾರದ ಬೆಂಬಲದೊಂದಿಗೆ 12 High Traffic Density Corridor ಗಳ ಅಭಿವೃದ್ಧಿಗೆ ಪ್ರತ್ಯೇಕ ESCROW ಖಾತೆಯನ್ನು ತೆರೆದ ಪಕ್ಷದಲ್ಲಿ ಸದರಿ ರಸ್ತೆಗಳ ಅಭಿವೃದ್ಧಿಗೆ ಯಾವುದೇ ಕೊರತೆಯುಂಟಾಗದಂತೆ ಸೂಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.
5. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 12 High Traffic Density Corridor ಗಳ 474 ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ನಿರ್ವಹಣೆಯನ್ನು ಪ್ರತ್ಯೇಕವಾದ "ರಸ್ತೆ ಮೂಲಭೂತ ಸೌಕರ್ಯ" ಶಾಖೆಯನ್ನು ರಚಿಸಿರುವ ಹಿನ್ನೆಲೆಯಲ್ಲಿ, ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಯಾವುದೇ "ಹೆಚ್ಚುವರಿ ಆಡಳಿತಾತ್ಮಕ ವೆಚ್ಚ"ವಿಲ್ಲದಂತೆ ನಿರ್ವಹಿಸಬಹುದಾಗಿರುತ್ತದೆ.
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 12 High Traffic Density Corridor ಗಳ ಅಭಿವೃದ್ಧಿಗೆ "ರಸ್ತೆ ಮೂಲಭೂತ ಸೌಕರ್ಯ ಶಾಖೆಯ ಅಡಿಯಲ್ಲಿ ಪ್ರತ್ಯೇಕ ವಿಭಾಗವನ್ನು ಸೃಜಿಸಲು ಪಾಲಿಕೆಯು ಬದ್ಧವಾಗಿರುತ್ತದೆ.
7. ಈಗಾಗಲೇ ಪಾಲಿಕೆಯು Directorate of Urban Land Transport (DULT) ಸಂಸ್ಥೆಯ ಸಮನ್ವಯದೊಂದಿಗೆ ಬಸ್ ಆದ್ಯತೆ ಮಾರ್ಗ (Bus Priority Lane) and Pop-up Cycle Lane ಗಳನ್ನು ನಿರ್ವಹಿಸುತ್ತಿದ್ದು, ಹಾಲಿ 12 High Traffic Density Corridor ಗಳಲ್ಲಿಯೂ

. . .7/-

Scanned by CamScanner

ಬಸ್ ಆದ್ಯತೆ ಪಥಗಳ (Bus Priority Lane) ಗಳ ನಿರ್ಮಾಣವಾಗಬೇಕಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವಾನುಭವದಿಂದ ಪ್ರಸ್ತುತ 12 High Traffic Density Corridor ಗಳ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು.

8. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಭಿಯಂತರರಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಸ್ಕಾಂ ಮತ್ತು ಇತರೆ ಇಲಾಖೆಗಳೊಂದಿಗೆ ಹೆಚ್ಚಿನ ಸಮನ್ವಯತೆಯ ಅನುಭವವಿದ್ದು, MARCCS ತಂತ್ರಜ್ಞಾನದ ಅಡಿಯಲ್ಲಿ ಯಾವುದೇ ಹೆಚ್ಚುವರಿ ಸಿಬ್ಬಂದಿ ಇಲ್ಲದಂತೆ ರಸ್ತೆ ಕತ್ತರಿಸುವಿಕೆಯ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.
9. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆ ಅಗಲೀಕರಣಕ್ಕಾಗಿ ಟಿ.ಡಿ.ಆರ್ ಬಳಸುವ ಅನುಕೂಲವಿದ್ದು, ಸದರಿ ಅನುಕೂಲವು ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಗೆ ಲಭ್ಯವಿರುವುದಿಲ್ಲ.

ಆದುದರಿಂದ, ಮೇಲಿನ ಕ್ರಮ ಸಂಖ್ಯೆ: 01 ಮತ್ತು 02ರ ಸಾಕ್ಷಿ ಮತ್ತು ಅನುಭವದಿಂದ ಹಾಗೂ ಪಾಲಿಕೆಗೆ ತನ್ನ ಸರಹದ್ದಿನ ವ್ಯಾಪ್ತಿಯಲ್ಲಿ ರಸ್ತೆಗಳ ಮೇಲ್ವಿಚಾರಣೆ / ಅಭಿವೃದ್ಧಿ ಮತ್ತು ಉನ್ನತೀಕರಣವು ಸುಲಲಿತವಾಗಿರುತ್ತದೆಂದು ಅಭಿಪ್ರಾಯಿಸುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವಂತೆ ಬಿಬಿಎಂಪಿ ಆಯುಕ್ತರು ಕೋರಿರುತ್ತಾರೆ.

1. ಸದರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 12 High Traffic Density Corridor ಗಳ ಅಭಿವೃದ್ಧಿಯ ಅನುಷ್ಠಾನದ ಪ್ರಕ್ರಿಯೆಯನ್ನು ಪಾಲಿಕೆಗೆ ಮರು ನಿಯೋಜಿಸಲು ಅನುಮೋದನೆ.
2. ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಪ್ರತ್ಯೇಕ ESCROW ಖಾತೆಯನ್ನು ತೆರೆದು 12 High Traffic Density Corridor ಗಳ ಅಭಿವೃದ್ಧಿ ಕೈಗೊಳ್ಳಲು ಅನುಮೋದನೆ.
3. ಸದರಿ ಕಾಮಗಾರಿಗಳಿಗೆ ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯ ವತಿಯಿಂದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿದ್ದ ಪಕ್ಷದಲ್ಲಿ, ಸದರಿ ವಿಸ್ತೃತ ಯೋಜನಾ ವರದಿಯನ್ನು DULT ಸಂಸ್ಥೆಯ ನಿರ್ದೇಶನದಲ್ಲಿ ಮರು ಪರಿಶೀಲನೆಗೆ ಒಳಪಡಿಸಿ, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಗೊಳಿಸಲು ಅನುಮೋದನೆ.
4. ಸದರಿ ಕಾಮಗಾರಿಗಳಿಗೆ ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯ ವತಿಯಿಂದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಖಾಸಗಿ ಯೋಜನಾ ಸಲಹೆಗಾರರ ಸೇವೆಯನ್ನು ಮುಂದುವರೆಸಲು ಹಾಗೂ DULT ಸಂಸ್ಥೆಯ ನಿರ್ದೇಶನದಲ್ಲಿ ಮರು ಪರಿಶೀಲನೆಗೆ ಒಳಪಡಿಸಿ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಗೊಳಿಸಲು ಅನುಮೋದನೆ.
5. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಈಗಾಗಲೇ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ಆಯವ್ಯಯ ಶೀರ್ಷಿಕೆ ಸಂಖ್ಯೆ: 4217-01-800-0-02 "Capital Support to Special Infrastructure Project of Bangalore" ಎಂಬ ಶೀರ್ಷಿಕೆ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಅನುಮೋದನೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಬಿಬಿಎಂಪಿ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

S/-

Scanned by CamScanner

ಸರ್ಕಾರಿ ಆದೇಶ ಸಂಖ್ಯೆ: ನಅಇ 109 ಎಂಎನ್‌ವೈ 2020,
ಬೆಂಗಳೂರು, ದಿನಾಂಕ: 24-11-2020.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 12 High Traffic Density Corridor ಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಅನುಷ್ಠಾನದ ಕಾರ್ಯವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (KRDCL) ವತಿಯಿಂದ ನಿರ್ವಹಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತಾಪಿತ 12 High Traffic Density Corridorಗಳ ಅಭಿವೃದ್ಧಿಯ ಅನುಷ್ಠಾನದ ಪ್ರಕ್ರಿಯೆಯನ್ನು ರೂ.477.29 ಕೋಟಿಗಳ ಅಂದಾಜು ವೆಚ್ಚಕ್ಕೆ ಸೀಮಿತಗೊಳಿಸಿ ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು ಅನುಮೋದನೆ,
2. ಸದರಿ ಕಾಮಗಾರಿಗಳಿಗೆ ಮೆ॥ ಕೆ.ಆರ್.ಡಿ.ಸಿ.ಎಲ್ ಸಂಸ್ಥೆಯ ವತಿಯಿಂದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ನೇಮಿಸಲಾಗಿದ್ದ ಖಾಸಗಿ ಯೋಜನಾ ಸಲಹೆಗಾರರ ಸೇವೆಯನ್ನು ಮುಂದುವರೆಸಲು ಹಾಗೂ DULT ಸಂಸ್ಥೆಯ ನಿರ್ದೇಶನದಲ್ಲಿ ವಿಸ್ತೃತ ಯೋಜನಾ ವರದಿಯನ್ನು ಅಂತಿಮಗೊಳಿಸಲು ಅನುಮೋದನೆ,
3. ವಿಸ್ತೃತ ಯೋಜನಾ ವರದಿಯ ಕಾಮಗಾರಿಗಳನ್ನು ಪ್ರತಿ ಕಾರಿಡಾರ್ ವ್ಯಾಪ್ತಿಗೆ ಸೀಮಿತವಾಗಿ ಒಂದು ಪ್ಯಾಕೇಜ್ ಮಾಡಿ, ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ: 14-07-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ,
4. ಆರ್ಥಿಕ ಇಲಾಖೆ ಅನುಮೋದಿಸಿರುವಂತೆ ಅಭಿವೃದ್ಧಿ ಕಾಮಗಾರಿ ಕೈಗೊಂಡ ಭಾಗದಲ್ಲಿ ಅನುಷ್ಠಾನ ಮತ್ತು ದೋಷ ಬಾಧ್ಯತಾ ಅವಧಿ ಪೂರ್ಣಗೊಂಡ ನಂತರದಲ್ಲಿ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳದ ಭಾಗದಲ್ಲಿ ವಿಸ್ತೃತ ಯೋಜನಾ ವರದಿ ಅಂತಿಮಗೊಂಡ ನಂತರ ಪ್ರತಿ ಕಾರಿಡಾರ್ ವ್ಯಾಪ್ತಿಗೆ ಸೀಮಿತವಾಗಿ ಒಂದು ಪ್ಯಾಕೇಜ್ ಮಾಡಿ ವಾರ್ಷಿಕ ನಿರ್ವಹಣೆ ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ:14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ದಿನಾಂಕ: 12-11-2020 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ:525/2020 ರಲ್ಲಿ ಕೈಗೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಷರತ್ತುಗಳು:

a) The approval is limited to Rs.400 Crore for the year 2020-21 of which Rs.300 Crore for improvements and Rs.100 Crore for maintenance.
b) The expenditure is to be borne from the HoA: "4217-01-800-0-02 Capital support to Special Infrastructure Project of Bangalore" as and when releases are made.

. . .9/-

Scanned by CamScanner

c) The maintenance commitment from Government of Karnataka will be limited to Rs.100 Crore per year for the next 4 years i.e. from 2021-22 to 2024-25.

d) If the project cost exceeds (a) and (c) above, BBMP has to bear it through their own funds through appropriate Council Resolution since this is one of the core responsibilities of BBMP.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ).

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
6. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಮುಖ್ಯ ಕಾರ್ಯದರ್ಶಿರವರ ಕಚೇರಿ, ವಿಧಾನಸೌಧ, ಬೆಂಗಳೂರು. (ವಿಷಯ ಸಂಖ್ಯೆ: ಸಿ:525/2020, ದಿನಾಂಕ: 12-11-2020).
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
12. ಸರ್ಕಾರದ ಜಂಟಿ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
13. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner